# ಕೇಳ್ಗೇ ಗೆಳತಿ...

ಇವಳು ನನ್ನ ಆತ್ಮ ಬಂಧು! ನನ್ನ ಮೊಟ್ಟ ಮೊದಲ ಸ್ನೇಹಿತೆ, ರಾಖೀ ಸಹೋದರಿಯಾದರೂ, ನಮ್ಮ ನಡುವೆ ಭ್ರಾತೃತ್ವಕ್ಕಿಂತ ಸ್ನೇಹವೇ ಹೆಚ್ಚು! ಶಾಲೆಯಲ್ಲಿ ಐದು ವರ್ಷ ಒಟ್ಟೊಟ್ಟಿಗೇ ಓದಿದ್ದರೂ ಚಿಗುರದಿದ್ದ ಸ್ನೇಹ ಚಿಗುರಿ ಹೆಮ್ಮರವಾದದ್ದು ನಾನಿವಳ ಹಳ್ಳಿಗೆ ಇವಳ ಮನೆಗೆ ಹೋದಾಗ. ಅಲ್ಲಿಂದ ಹಿಡಿದು ಇದುವರೆಗೂ ಇವಳ, ಇವಳ ಸ್ನೇಹದ ನೆನಪಾದಾಗಲೆಲ್ಲ ಹೆಮ್ಮೆಯಿಂದ ನನ್ನೆದೆ ತುಂಬಿ ಬರುತ್ತದೆ, ಜೀವನ ನನ್ನಂತಹ ಮುಖೇಡಿಗೂ ಇಂತಹದೊಂದು ಅತ್ಯಪೂರ್ವ ಸ್ನೇಹದ ಉಡುಗೊರೆ ಕೊಟ್ಟಿದೆಯಲ್ಲಾ ಎಂದೆನಿಸಿ ನಾನು ತುಂಬಾ ಅದೃಷ್ಟವಂತ ಅನಿಸುತ್ತದೆ...

ಮಲೆನಾಡಿನ ನಡುವಿನೂರಿನ ಇವಳ ಪುಟ್ಟ ಬಾಡಿಗೆ ಮನೆಗೆ ಹೋದರೆ ನನಗೆ ರಾಜೋಪಚಾರ. ನನ್ನೊಡನೆ ಬಂದ ಸ್ನೇಹಿತನಿಗೂ ಅದೇ. ಬೆಳಿಗ್ಗೆ ಸ್ವಲ್ಪ ಬೇಗ ಎದ್ದರೆ, 'ಇನ್ನೂ ಸ್ವಲ್ಪ ಹೊತ್ತು ಮಲಗಿಕೊಂಡಿರೋ' ಅಂತಾಳೆ. 'ಕಾಫಿ ಮಾಡ್ಲಾ? ಹಾರ್ಲಿಕ್ಸ್ ಮಾಡ್ಲಾ?' 'ತಿಂಡಿಗೇನು ಮಾಡ್ಲಿ? ನಿಂಗೇನಿಷ್ಟ?' ಅಂತಾ ಶುರುಮಾಡ್ಕೊತಾಳೆ. 'ನಾನೇನಾದರೂ ಸಹಾಯ ಮಾಡ್ತೀನಿ ಕಣೇ' ಅಂದರೆ, 'ಏನೂ ಮಾಡ್ಬೇಡ, ಸುಮ್ನೇ ಇಲ್ಲೇ ಚಾಪೆ ಹಾಕ್ಕೊಂಡು ಕೂತ್ಕೋ, ಕಂಪ್ನೀ ಕೊಡು' ಅಂತಾಳೆ. 'ಯಾವುದಾದ್ರೂ ಬಟ್ಟೆ ಒಗೆಯೋದಿದ್ರೆ ಕೊಡೋ, ಒಗೆದು ಹಾಕ್ತೀನಿ' ಅಂತಾಳೆ. 'ಒಂದೇ ದಿನಕ್ಕೆ ಬಂದಿದೀನಿ' ಅಂದರೆ 'ಎರಡು ದಿನಾನಾದ್ರೂ ಇರ್ರೋ' ಅಂತ ಕೊರಗುತ್ತಾಳೆ. 'ಎರಡು ದಿನವಾದ್ರೆ ಪರವಾಗಿಲ್ಲ' ಅಂದರೆ ಮೂರನೇ ದಿನದ ಪ್ಲಾನು ಹೇಳಿ ಸಣ್ಣ ಮಕ್ಕಳಿಗೆ ಆಸೆ ತೋರಿಸುವಂತೆ ನಮ್ಮನ್ನು ಓಲೈಸುತ್ತಾಳೆ. ನನ್ನ ಸ್ನೇಹಿತನನ್ನು ನೋಡಿ ನನ್ನ ಮುಂದೆ, 'ಪರ್ವಾಗಿಲ್ಲ ಕಣೋ! ನಾನು ನಿನ್ನ ಫ್ರೆಂಡ್ ಅಂದ್ರೆ ಸ್ವಲ್ಪ ಸ್ಟಾಂಡರ್ಡು ಅಂತ್ಕೊಂಡು ಹೆದರಿದ್ದೆ, ಆದ್ರೆ ಅವ್ನೂ ನಿನ್ನ ತರಾನೇ!' ಅಂತ ಸರಿಯಾಗಿ ಚುಚ್ಚಿಯೂ ಬಿಡುತ್ತಾಳೆ...

ಬಡಿಸಲಿಕ್ಕೆ ನಿಂತರೆ ಇವಳ ಓಲೈಸುವಿಕೆಗೆ ಇನ್ನಷ್ಟು ಬಲ ಬಂದು ಬಿಡುತ್ತದೆ, 'ಇನ್ನೊಂದಿಷ್ಟು ಹಾಕಿಸ್ಕೊಳ್ಳೋ', 'ಇದೊಂದಿಷ್ಟು ಪೀಸ್ ಬಡಿಸಲಾ? ಯಾಕೋ ತಿಂದೇ ಇಲ್ವಲ್ಲೋ? ಚೆನ್ನಾಗಿಲ್ವೇನೋ?' ಎಂಬ ರಮಿಸುವಿಕೆಯಿಂದ ಹಿಡಿದು, 'ಯಾಕ್ವೋಳು? ಈ ಬಿರ್ಯಾನಿಯಿಲ್ಲ ಈಗ್ಲೇ ಖಾಲಿಯಾಗಿಬಿಡಬೇಕು, ಇಲ್ದಿದ್ರೆ ಬೆಳಿಗ್ಗೆಗೆ ಇದೇ ತಿಂಡಿ!' ಅನ್ನೋ ಬೆದರಿಕೆಗಳೂ ಇವಳಿಗೆ ಗೊತ್ತು. ದಿನದ ಯಾವುದೇ ಸಮಯದಲ್ಲಾದ್ರೂ ಸರಿ, ಮನೆಯಲ್ಲಿದ್ದರೆ 'ಹೊಟ್ಟೆ ಹಸಿತಿದೆಯೇನ್ರೋ?', 'ಫ್ರೆಶ್ಶಾಗಿ ಪುನರ್ಪುಳಿ ಜ್ಯೂಸ್ ಮಾಡಲಾ?', 'ಬಿಸ್ಕೆಟ್ ತಿನ್ರೋ!'... ಇತ್ಯಾದಿ ಗಡಿಬಿಡಿ ಮಾಡುತ್ತಲೇ ಇರುತ್ತಾಳೆ. ಮೊದಲನೇ ದಿನ ಚಿಕನ್ನು, ಎರಡನೇ ದಿನ ಮೀನು, ಮೂರನೇ ದಿನ ಬರೀ ವೆಜಿಟೇರಿಯನ್ನು ಅಂತೆಲ್ಲ ಇವಳ ಪಟ್ಟಿ ಕೇಳಿಯೇ ನಾವು ಸುಸ್ತಾಗುತ್ತೇವೆಯಾದರೂ ಮೂರು ದಿನವೂ ಇವಳ ಓಲೈಸುವಿಕೆಗೆ ಕರಗಿ ಎಂದೂ ತಿನ್ನದಷ್ಟು ತಿಂದು ತೇಗುತ್ತೇವೆ!

ನಮಗೆಲ್ಲರಿಗೂ ಅಡ್ಡ ಹೆಸರು ಕರೆಯುವುದರಲ್ಲಿ ನಿಷ್ಣಾತಳಾದ ಇವಳನ್ನು ನಾನು ಸಂಬೋಧಿಸುವುದೂ ಕೂಡ ವಿಶಿಷ್ಟವಾಗಿಯೇ! ಬಾಯಿಗೆ ಬಂದದ್ದು ಕರೆದರೂ ಓಗೊಡುತ್ತಾಳೆ. ಚಂದದ ಹೆಸರನ್ನು ಅರ್ಧ ಮಾಡಿ, ಹುಡುಗನ ಹೆಸರು ಮಾಡಿ 'ಹೋಗೋ, ಬಾರೋ, ಊಟ ಆಯ್ತೇನೋ?' ಅಂತೆಲ್ಲ ಕರೆದಿದ್ದೇನೆ, ಮಾತನಾಡಿದ್ದಾಳೆ, 'ಹುಡುಗೀ, ಮಗಳೇ, ಹೆಣ್ಣೇ, ತಾಯೀ, ಅಮ್ಮಾ, ಜಗಜ್ಜನನಿ, ಜಗನ್ಮಾತೆ..." ಏನೆಲ್ಲ ಕರೆದರೂ ಇವಳಿಗೆ ಕೇಳಿಸಿಯೇ ಇದೆ, ಮತ್ತು ಅವೆಲ್ಲವನ್ನೂ ನಕ್ಕು, ಮೌನವಾಗಿ ಇಷ್ಟಪಟ್ಟಿದ್ದಾಳೆ...

ಪ್ರತೀಸಲ ಫೋನು ಮಾಡಿ, 'ಈ ವಾರಾಂತ್ಯಕ್ಕೆ ಬರ್ತಾ ಇದೀನಿ ಕಣೋ, ಏನಾದ್ರೂ ತರ್ಲೇನೋ?' ಅಂತ ಕೇಳಿದಾಗಲೆಲ್ಲ ಇವಳು ಏನನ್ನೂ ಕೇಳಿಲ್ಲ. ನಾನಾಗೇ ಕೇಳಿ ಮೊಬೈಲ್ ತೆಗೆದುಕೊಟ್ಟೆ, ಸುಮ್ಮನೊಂದು 'ನಂಗೇನೋ? ಥ್ಯಾಂಕ್ಸ್ ಕಣೋ!' ಹೇಳಿದಳು. ಪುಟ್ಟದೊಂದು ಸಿಡಿ ಪ್ಲೇಯರ್, ಇವಳ ಟೇಪ್ ರಿಕಾರ್ಡರ್‌ನ ಹೊಟ್ಟೆಗೆ ಹೊಸಾ ಹೊಸಾ ಕ್ಯಾಸೆಟ್ಟುಗಳು, ಇವಳ ಓದಿಗೆ ಪುಸ್ತಕಗಳು, ಹಿಂತಿರುಗಿ ಬರುವಾಗ ನಾನಾಗೇ 'ಇಟ್ಕೋಳೋ' ಅಂತ ಕೊಟ್ಟ ದುಡ್ಡು ಎಲ್ಲವನ್ನೂ ನಿರೀಕ್ಷೆಯೇ ಇಲ್ಲದ ನಿರ್ಲಿಪ್ತತೆಯಿಂದ (ಕೆಲವೊಮ್ಮೆ ಮಾತ್ರ, ಒಂದೇ ಒಂದು ಬಾರಿ 'ಬೇಡ ಕಣೋ, ಸುಮ್ನೇ ಯಾಕಿದೆಲ್ಲ?' ಅಂದು, ನಂತರ ಜಾಸ್ತಿ ಒತ್ತಾಯವಿಲ್ಲದೇ), ಸಹಜತೆಯಿಂದ, ಆಪ್ತತೆಯಿಂದ ಒಪ್ಪಿಸಿಕೊಳ್ಳುತ್ತಾಳೆ.

ಓದುವಿಕೆ, ಬರಹ, ಪುಸ್ತಕಗಳ ವಿಷಯಕ್ಕೆ ಬಂದರೆ ಇವಳು ನನಗಿಂತ ಜಾಣೆ, ಪ್ರಬುದ್ಧೆ. ಟಿಸಿಎಚ್ ಮುಗಿಸಿ, ಅಪ್ಪ ಅಮ್ಮನಿಂದ ದೂರ ಆ ಪುಟ್ಟ ಊರಿನಲ್ಲಿ ಟೀಚರ್ ಕೆಲಸ ಮಾಡಿಕೊಂಡೇ ಬೀಯೇ ಕಟ್ಟಿ, ಇಂಗ್ಲೀಷಿನಲ್ಲಿ ಎಮ್ಮೇನೂ ಮುಗಿಸಿ ಮತ್ತೇನು ಮಾಡಲಿ ಅನ್ನುತ್ತಿದ್ದಾಳೆ. ನಾನು ಮೂರು ವರ್ಷದ ಇಂಜಿನಿಯರಿಂಗನ್ನು ನಾಲ್ಕು ವರ್ಷಗಳಾದರೂ ಮುಗಿಸದೇ ಬೇಸತ್ತಿದ್ದೇನೆ. ಕನ್ನಡದ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಗಳಲ್ಲೆಲ್ಲ ಇವಳದೊಂದು ಬರಹ, ಕತೆ, ನಿಬಂಧ! 'ಈ ಕಾಡಿನೊಳಗಿದ್ದುಕೊಂಡು ಏನು ಬರೀಲೋ? ನಿನಗಾದ್ರೆ ಎಷ್ಟೊಂದ್ ವಿಷಯಗಳು ಸಿಗುತ್ವೆ?' ಅಂತೆಲ್ಲ ಕೊರಗಿಕೊಂಡೇ,

ಸುಮ್ಮನೆ ಚೆಂದದೊಂದು ಲಹರಿ ಬರೆದು, ಅದು ಪ್ರಕಟವಾದಾಗ ನನಗೆ ಫೋನ್ ಮಾಡಿ ಸಂಭ್ರಮಿಸುತ್ತಾಳೆ, ಅಚ್ಚರಿಗೊಳಿಸುತ್ತಾಳೆ. 'ಸಕ್ಕತ್ತಾಗಿ ಓದಬೇಕು ಕಣೇ' ಅಂತ ನಾನು ಪುಸ್ತಕಗಳನ್ನೊಯ್ದು ಕೊಡುತ್ತೇನೆ, ಸದ್ದಿಲ್ಲದೇ ಓದಿ ಮುಗಿಸುತ್ತಾಳೆ. ನಾವಿಬ್ಬರೂ ರೀಡರ್ಸ್ ಡೈಜೆಸ್ಟಿನ ವಾರ್ಷಿಕ ಚಂದಾದಾರರಾಗುತ್ತೇವೆ, ಗಡುವು ಮುಗಿದ ಕೂಡಲೇ ನನ್ನಿಂದಲೇ ಮತ್ತೊಂದು ವರ್ಷಕ್ಕೆ ಚಂದಾ ನವೀಕರಣ ಮಾಡಿಸಿಕೊಳ್ಳುತ್ತಾಳೆ, ನನ್ನದು ತಪ್ಪಾಗುತ್ತದೆ.

ಮಾತಿಗೆ ಬಿದ್ದರೆ ಇವಳ–ನನ್ನ ಓದು, ನನ್ನ ಆಫೀಸು, ಕೆಲಸ, ಹುಡುಗಿಯರು, ನನ್ನ ಗರ್ಲ್ ಫ್ರೆಂಡ್ಸು(!), ನನ್ನ ಪ್ರೇಮ, ಇತ್ತೀಚೆಗೆ ನೋಡಿದ ಸಿನೆಮಾ, ಅವಳ ಸಹೋದ್ಯೋಗಿಗಳು, ನಮ್ಮಿಬ್ಬರ ಬರಹ, ರೀಡರ್ಸ್ ಡೈಜೆಸ್ಟಿನ ಯಾವುದೋ ಲೇಖನ, ಆಚೆ ವಾರ ನಾನು ಅಳುಕಳುಕುತ್ತಲೇ ಕೊಟ್ಟಿದ್ದ ಸತ್ಯಕಾಮರ 'ಸ್ವತಂತ್ರ್ಯ'ದ ಕತೆಗಳು, ಯಾವುದೋ ಮಾಸಿಕದ ಯಾವುದೋ ಮೂಲೆಯ 'ಪೋಸ್ಟ್ ಕಾರ್ಡಿನಲ್ಲಿ ಕತೆ'ಗಳೆಲ್ಲ ನಮ್ಮ ಹರಟೆಯ ವಿಷಯವಾಗುತ್ತವೆ. ಇತ್ತಿತ್ತಲಾಗಿ ಇವಳ ಬರಹಕ್ಕೆ, ಮಾತಿಗೊಂದು ಹರಿತ ಬಂದು ಬಿಟ್ಟಿದೆ. ಹಾಗಾಗಿ ನನ್ನ ಪ್ರತೀ ಮಾತಿಗೂ ಕೊಂಕು ತೆಗೆಯುತ್ತಾಳೆ, ಪೇಚಿಗೆ ಸಿಕ್ಕಿಸಿ, ನಕ್ಕುಬಿಡುತ್ತಾಳೆ...

ಹೀಗೇ ಓತಪ್ರೋತವಾಗಿ ಮಾತು ಜಾರಿಯಲ್ಲಿರುವಾಗಲ್ಲೆಲ್ಲೋ ಒಮ್ಮೊಮ್ಮೆ ಮೌನಿಯಾಗುತ್ತಾಳೆ, ನಾನು ಮಾತನಾಡಿಸದೇ ಸುಮ್ಮನಿದ್ದರೆ ಮೆಲ್ಲನೆ ಮನದ ಖಾಸಗೀ ಮಾತು, ಭಯ, ಅಭದ್ರತೆ, ದುಃಖ, ದುಗುಡಗಳನ್ನೆಲ್ಲ ತೋಡಿಕೊಳ್ಳುತ್ತಾಳೆ; ನಿಸ್ಸಹಾಯಕಳಂತೆ ನನ್ನ ಮಾತಿಗೆ, ಅದು ಕೊಡುವ ಸುಳ್ಳು ಸಾಂತ್ವನಕ್ಕೆ ಕಾಯುತ್ತಾಳೆ; ಪುಟ್ಟ ಮಗುವಿನ ಹಾಗೆ ಪ್ರಶ್ನೆಗಳ ಕೇಳುತ್ತಾಳೆ. ಅದೆಲ್ಲ ಬರೀ ಎರಡೇ ನಿಮಿಷವಷ್ಟೆ! ಮತ್ತೆಲ್ಲ ಮರೆತು, ಉತ್ಸಾಹದೂಟೆಯಾಗಿ, ಒಲುಮೆಯ ಚಿಲುಮೆಯಾಗಿ ಮಾತು ಹರಿಸುತ್ತಾಳೆ, ನಕ್ಕುಬಿಟ್ಟು ಮೌನದ ಪ್ರಶ್ನೆಗಳನ್ನೆಲ್ಲ ಮರೆಸಿಬಿಡುತ್ತಾಳೆ, ನನಗೇ ಸಾಂತ್ವನ ಹೇಳುತ್ತಾಳೆ, ಆತ್ಮ ವಿಶ್ವಾಸ ತುಂಬುತ್ತಾಳೆ...

ಹೀಗೆಲ್ಲ ನಮ್ಮಿಬ್ಬರ ಸ್ನೇಹದ ಬಗ್ಗೆ ಬರೆದರೆ ಮನದೊಳಗಿನ ಮಾತುಗಳೆಲ್ಲ, ಭಾವಗಳೆಲ್ಲ, ಮೌನ ಪ್ರೀತಿಯೆಲ್ಲ ಬರಿಯ ಪದಗಳಾಗಿಬಿಡುತ್ತವೆ, ಪದಗಳಾಗಿ ಓದಿಸಿಕೊಂಡು ವಾಚ್ಯವಾಗಿಬಿಡುತ್ತವೆ, ವಾಚ್ಯವಾಗಿ ಬೇರೊಂದು ರೀತಿಯಲ್ಲೇ ಹೊಸದಾಗಿ ಮನಸ ಮುಟ್ಟಿ ಹೊಗಳಿಕೆಗಳಾಗಿ ಹಗುರಾಗಿಬಿಡುತ್ತವೆ ಎಂಬ ಹೆದರಿಕೆಯಿದ್ದರೂ ಇವಳ ಬಗ್ಗೆ ಬರೆಯುತ್ತಿದ್ದೇನೆ..

ಇಂಥಾ ಗೆಳತಿಯ ಗೆಳೆತನಕ್ಕೆ, ಅದು ತಂದ ಗೆಲ್ಮೆಗೆ, ನಲ್ಮೆಗೆ, ಆತ್ಮವಿಶ್ವಾಸಕ್ಕೆ, ನಂಬಿಕೆಗೆ, ಪ್ರೀತಿಗೆ, ಸಂಪ್ರೀತಿಗೆ, ಮಾತಿಗೆ, ಮೌನಕ್ಕೆ ಇವತ್ತು ನನ್ನದೊಂದು ಪುಟ್ಟ ಥ್ಯಾಂಕ್ಸ್. ಮತ್ತು ಇವಳಿಗೆ 'ಹ್ಯಾಪಿ ಬರ್ತ್‌ಡೇ!'

## ಹ್ಯಾಪಿ ಬರ್ತ್‌ಡೇ ಕಣೇ ಹುಡುಗೀ!

**ಶಿವಕುಮಾರ ಕೆ. ಎಸ್. k_s_shivu@yahoo.com**